ಸಿ.ಸಿ .ನಂ.225/2022 ಪಿಡಬ್ಲೂಃ 1

ದಿನಾಂಕಃ 26-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

4. ನಮ್ಮ ಬ್ಯಾಂಕಿನ ನಿಯಮಾವಳಿಯ ಪ್ರಕಾರ ನಿರ್ದೇಶಕರಾದವರು , ಮ್ಯಾನೇಜರಾಗಿ, ಅಥವಾ ವಸೂಲಾತಿ ಅಧಿಕಾರಿಯಾಗಿ ಎರಡು ಕಾರ್ಯಗಳನ್ನು ನಿರ್ವಹಿಸಬಹುದು . ಅದನ್ನು ನಾನು ಬೈಲಾ ಓದಿಕೊಂಡು ತಿಳಿದುಕೊಂಡು ಹೇಳುತ್ತಿದ್ದೇನೆ. ಆ ರೀತಿ ಎರಡು ಕರ್ತವ್ಯಗಳನ್ನು ನಿರ್ವಹಿಸಬಹುದು ಎಂದು ತೋರಿಸಲು ನಮ್ಮ ಬ್ಯಾಂಕಿನ ಬೈಲಾ ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ . ಸಾಕ್ಷಿ ಸ್ವಲ್ಪ ಹೊತ್ತು ತಡೆದು ಪುನಃ ಸ್ವತಃ ನ್ಯಾಯಾಲಯ ಆದೇಶ ಮಾಡಿದರೆ ಹಾಜರು ಪಡಿಸುತ್ತೇವೆ ಎಂದು ನುಡಿದಿರುತ್ತಾರೆ. ನಮ್ಮ ಬ್ಯಾಂಕು ಬೈಲಾ ಪ್ರಕಾರ ಕಾರ್ಯ ನಿರ್ವಹಿಸುತ್ತದೆ . ನಮ್ಮ ಸೌಹಾರ್ದ ಪತ್ತಿನ ಸಹಕಾರಿ ಹೊರತು ಯಾವುದೇ ಸಂಘ ಸಂಸ್ಥೆ ಅಲ್ಲ ಎಂದರೆ ಸಾಕ್ಷಿ ಮೊದಲು ಸಂಘ ಇತ್ತು ಈಗ ಸೌಹಾರ್ದ ಆಗಿದೆ ಎಂದು ನುಡಿದಿರುತ್ತಾರೆ . ಮೊದಲು ಜಯಲಕ್ಷ್ಮಿ ಪತ್ತಿನ ಸಹಕಾರಿ ಸಂಘವಾಗಿತ್ತು ಯಾವ ಇಸ್ವಿಯಲ್ಲಿತ್ತು ನೆನಪಿಲ್ಲ. ಮೊದಲು ಜಯಲಕ್ಷ್ಮಿ ಪತ್ತಿನ ಸಹಕಾರಿ ಸಂಘ್ ವಾಗಿತ್ತು ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಲು ತೊಂದರೆ ಇಲ್ಲ . ಜಯಲಕ್ಷ್ಮಿ ಪತ್ತಿನ ಸಹಕಾರಿ ಸಂಘಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕ ನಿಯಮಾವಳಿಗಳು ಇರುತ್ತವೆ ಎಂದರೆ ಮಾಹಿತಿ ಇಲ್ಲ . ಈಗ ಇರುವ ಬೈಲಾ ಯಾವ ಇಸ್ವಿಯಲ್ಲಿ ಬೈಲಾ ರಜಿಸ್ಟರ ಆಗಿದೆ ಮಾಹಿತಿ ಇಲ್ಲ . ಜಯಲಕ್ಷ್ಮಿ ಪತ್ತಿನ ಸಹಕಾರಿ ಸಂಘ ನಿಯಮಿತ ಯಾವ ಎಂದು ಯಾವಾಗ ರಜಿಸ್ಟರ ಆಯಿತು ಗೊತ್ತಿಲ್ಲ. ಜಯಲಕ್ಷ್ಮಿ ಪತ್ತಿನ ಸಹಕಾರಿ ಸಂಘ ಇತ್ತು ಎಂದು ಕೆಳಿ ತಿಳಿದುಕೊಂಡು ಹೇಳುತ್ತಿದ್ದೇನೆ. ಅಂತಹ ಸಂಘ ಇತ್ತು ಎಂದು ದಾಖಲಾತಿಯನ್ನು ನೋಡಿಲ್ಲ. ಈ ಪ್ರಕರಣ ದಾಖಲಿಸುವ ಸಂದರ್ಭದಲ್ಲಿ ನಮ್ಮ ಬ್ಯಾಂಕು ಸಂಘ ಆಗಿತ್ತೋ ಅಥವಾ ಸೌಹಾರ್ದ ಆಗಿತ್ತೋ ಮಾಹಿತಿ ಇಲ್ಲ. ಈ ಪ್ರಕರಣವನ್ನು ಸಂಘದ ಆಧಾರದ ಮೇಲೆ ದಾಖಲಿಸಿದ್ದೇವೋ ಅಥವಾ ಸೌಹಾರ್ದ ಆಧಾರದ

ಪಿಡಬ್ಲೂಃ 1

ಮೇಲೆ ದಾಖಲಿಸಿದ್ದೇವೋ ನೆನಪಿಲ್ಲ . ಈ ಪ್ರಕರಣದಲ್ಲಿ ಸಾಲಕ್ಕೆ ಸಂಬಂಧಪಟ್ಟಂತೆ ಪಡೆದುಕೊಂಡ ದಾಖಲಾತಗಳನ್ನು ಸಂಘಕ್ಕೆ ಸಂಬಂಧಪಟ್ಟಂತೆ ಪಡೆದುಕೊಂಡಿದ್ದೆವೋ ಅಥವಾ ಸೌಹಾರ್ದಕ್ಕೆ ಸಂಬಂಧಪಟ್ಟಂತೆ ತೆಗೆದುಕೊಂಡಿದ್ದೆವೋ ನನಗೆ ಮಾಹಿತಿ ಇಲ್ಲ , ಹಿಂದಿನ ಶಾಖಾ ವ್ಯವಸ್ಥಾಪಕರಿಗೆ ಗೊತ್ತು.

(ಈ ಹಂತದಲ್ಲಿ ನ್ಯಾಯಾಲಯ ಅವಧಿ ಮುಕ್ತಾಯವಾದ ಕಾರಣ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.